## ಕರಿತಲೆ ಕಬ್ಬಕ್ಕಿ

ಸ್ಟರ್ನಿಯಾ ಪಗೋಡಾರಾಮ್ ಎಂಬ ವೈಜ್ಞಾನಿಕ ಹೆಸರುಳ್ಳ ಸ್ಟಾರ್ಲಿಂಗ್ ಕುಟುಂಬದ ಸದಸ್ಯನಾಗಿರುವ ಈ ಹಕ್ಕಿಯು ಭಾರತೀಯ ಉಪಖಂಡದ ಬಯಲು ಪ್ರದೇಶಗಳಲ್ಲಿ, ಒಣಕಾಡು, ಕೃಷಿ ಪ್ರದೇಶ, ಮನುಷ್ಯ ಆವಾಸಗಳ ಬಳಿ ಜೋಡಿಯಾಗಿ ಅಥವಾ ಸಣ್ಣ ಹಿಂಡುಗಳಲ್ಲಿ ಹೆಚ್ಚು ಕಾಣಸಿಗುತ್ತದೆ. ಕಪ್ಪು ಟೋಪಿ, ಮುಸುಕಾದ ಕೆನೆ ಬಣ್ಣ, ಕಣ್ಣಿನ ಸುತ್ತ ನೀಲಿ ಬಣ್ಣದ ಪ್ಯಾಚ್ ಇದ್ದು, ರೆಕ್ಕೆಗಳು ಕಪ್ಪಾಗಿರುತ್ತವೆ. ಗುಂಪುಗಳಲ್ಲಿ ಹಾರುವಾಗ ಸರಣಿಯಾಗಿ ಸಂಗೀತದಂತೆ ಶಬ್ದ ಮಾಡುತ್ತದೆ. ಮರದ ರಂಧ್ರಗಳಲ್ಲಿ ಗೂಡು ನಿರ್ಮಿಸುವ ಇದು ಮೂರರಿಂದ ನಾಲ್ಕು ಮೊಟ್ಟೆಗಳನ್ನಿಟ್ಟು ಕಾವುಕೊಟ್ಟು ಮರಿಮಾಡುತ್ತದೆ. ಹಣ್ಣು ಮತ್ತು ಕೀಟಗಳೆರಡನ್ನೂ ತಿನ್ನುವ ಮೂಲಕ ಸರ್ವಭಕ್ಷಕ ಹಕ್ಕಿ ಎನಿಸಿದೆ.

—ಪ.ನಾ. ಹಳ್ಳಿ. ಹರೀಶ್‌ಕುಮಾರ್, ತುಮಕೂರು





## ಕೆರೆಯಲ್ಲಿ ಕಂಡ ರ್‍ಯಾಲಿಡಿ

ಬತ್ತಿ ಹೋಗಿರುವ ಮತ್ತು ಕಲುಷಿತ ಕೆರೆಗಳೂ ಹೇಗೆ ಜೈವಿಕ ತಾಣಗಳಾಗಬಹುದು ಎಂಬುದಕ್ಕೆ ಈ ಮುದ್ದಾದ ಸಣ್ಣ ಹಕ್ಕಿಯೇ ಸಾಕ್ಷಿ. (ಫ್ಯಾಮಿಲಿ ರ್‍ಯಾಲಿಡಿ—family Rallidae) ಎಂಬ ನೀರು ಕೋಳಿಗಳ ಸಂಕುಲಕ್ಕೆ ಸೇರಿದ, ಆಂಗ್ಲ ಭಾಷೆಯಲ್ಲಿ ಬೈಲನ್ಸ್ ಕ್ರೇಕ್ (Baillon's Crake) ಎಂದು ಕರೆಯಲ್ಪಡುವ ಈ ಹಕ್ಕಿಯನ್ನು ಕ್ಲಿಕ್ಕಿಸಿದ್ದು ಬೆಂಗಳೂರಿನ ಸಮೀಪದ ಬಹಳವೇ ಬತ್ತಿ ಹೋಗಿದ್ದ ದೊಡ್ಡ ಕೆರೆಯ ಮೂಲೆಯೊಂದರಲ್ಲಿ. ಈ ಹಕ್ಕಿ ಕಾಣಸಿಗುವುದು ಬಹಳ ವಿರಳ.

—ಶ್ರೀನಿವಾಸನ್ ಎಸ್.ಕೆ. ಬೆಂಗಳೂರು

## ಬಗ್ಗವಳ್ಳಿಯ ಭೋಗಾನರಸಿಂಹ

ಹಲವು ಶಿಲ್ಪಕಲಾ ವೈಭವಗಳ ದೇಗುಲಗಳನ್ನು ತನ್ನೊಡಲೊಳಗೆ ಇರಿಸಿಕೊಂಡಿರುವ, ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನಲ್ಲಿರುವ ಬಗ್ಗವಳ್ಳಿಯ ಭೋಗಾನರಸಿಂಹ ದೇವಾಲಯ, 12ನೇ ಶತಮಾನದ ಹೊಯ್ಸಳರ ಕಾಲದ್ದು. ಹೊಯ್ಸಳರ ರಾಜ ಮೂರನೇ ಬಲ್ಲಾಳ ನಿರ್ಮಿಸಿದನೆಂಬ ಐತಿಹ್ಯ ಈ ಆಕರ್ಷಕ ದೇಗುಲಕ್ಕೆ ಇದೆ. ಇದರ ಮುಖ್ಯ ಗರ್ಭಗುಡಿಯಲ್ಲಿರುವುದು 1.52 ಮೀಟರ್ ಎತ್ತರದ, ಅತ್ಯಾಕರ್ಷಕ ಚನ್ನಕೇಶವನ ವಿಗ್ರಹ. ಇದರ ಎಡ ಬಲಕ್ಕೆ ಭೋಗಾನರಸಿಂಹ ಹಾಗೂ ಶಾರದಾಂಬೆಯ ಅಷ್ಟೇ ಆಕರ್ಷಕ ಹಾಗೂ ಶಿಲ್ಪ ನೈಪುಣ್ಯವುಳ್ಳ ವಿಗ್ರಹವಿದೆ. ಎಲ್ಲಾ ಹೊಯ್ಸಳ ಶೈಲಿಯ ದೇಗುಲಗಳಂತೆಯೇ, ಈ ದೇಗುಲ ಸಹ ನಕ್ಷತ್ರಾಕಾರದ ಪೀಠದ ಮೇಲೆ ನಿರ್ಮಿಸಲ್ಪಟ್ಟಿದೆ. ಗರ್ಭಗುಡಿಯ ಅಮೃತಶಿಲೆಯ ಕಂಭಗಳು, ನವರಂಗ, ಮುಖಮಂಟಪ ಎಲ್ಲವೂ ಅಂದಿನ ಭವ್ಯತೆ ದಿವ್ಯತೆಗಳನ್ನು ಸಾರಿ ಹೇಳುತ್ತವೆ. ಅಂದು ಭಾರ್ಗವಪುರವೆಂದು ಪ್ರಖ್ಯಾತವಾಗಿದ್ದ ಬಗ್ಗವಳ್ಳಿ ಇಂದು ಕೃಷಿ ಪ್ರಧಾನ ಪುಟ್ಟ ಹಳ್ಳಿ. ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯಿಂದ (A.S.I) ನಿರ್ವಹಿಸಲ್ಪಡುತ್ತಿರುವ ಎಲೆಮರೆ ಕಾಯಿಯಂತಹ ಈ ಪ್ರವಾಸಿತಾಣ, ಹೆಚ್ಚು ಜನಜಂಗುಳಿ ಇರದ ಹಾಗೂ ಮನಕ್ಕೆ ಮುದ ನೀಡುವ ಪ್ರಶಾಂತ ತಾಣ. ಬೀರೂರು ಅಜ್ಜಂಪುರಗಳ ಮಧ್ಯೆ ಸಿಗುವ ಈ ತಾಣ ಕಿರುಪ್ರವಾಸಕ್ಕೆ ಹೇಳಿಮಾಡಿಸಿದಂತಿದೆ.

—ಎಚ್.ಎಸ್. ನವೀನಕುಮಾರ್, ಹೊಸದುರ್ಗ

